# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | **614 (659)** |
| **ಮಾನ್ಯ ಸದಸ್ಯರ ಹೆಸರು** | **ಶ್ರೀ ಐವನ್ ಡಿ ಸೋಜಾ (ವಿಧಾನ ಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸಬೇಕಾದ ದಿನಾಂಕ** | **21.08.2026** |
| **ಉತ್ತರಿಸುವವರು** | **ಮಾನ್ಯ ಕಾರ್ಮಿಕ ಸಚಿವರು** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 3 ವರ್ಷಗಳಿಂದ ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ಎಷ್ಟು ಕಾರ್ಮಿಕರು ಸರ್ಕಾರದಲ್ಲಿ ನೋಂದಣಿ ಮಾಡಿಸಿಕೊಂಡಿದ್ದಾರೆ. ಯಾವ ಯಾವ ವಿಭಾಗದಲ್ಲಿ ಎಷ್ಟು ಕಾರ್ಮಿಕರು ನೋಂದಣಿ ಮಾಡಿಸಿ ಕೊಂಡಿರುತ್ತಾರೆ; (ವಿವರ ನೀಡುವುದು). | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಮಂಡಳಿಗಳ ಮೂಲಕ ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ಕಳೆದ 3 ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ನೋಂದಾಯಿತರಾದ ಕಾರ್ಮಿಕರ ವಿವರಗಳು ಈ ಕೆಳಕಂಡಂತಿವೆ.<br><br>**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ.**<br><br>ಈ ಮಂಡಳಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ಕಳೆದ 3 ವರ್ಷಗಳಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ **12,777** ಕಟ್ಟಡ ಮತ್ತು ಇತರ ನಿರ್ಮಾಣ ಕಾಮಗಾರಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರನ್ನು ನೋಂದಾಯಿಸಲಾಗಿರುತ್ತದೆ.<br><br>**ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ**<br><br>ಈ ಮಂಡಳಿಯು ಜಾರಿಗೊಳಿಸುತ್ತಿರುವ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ವಿವಿಧ ವಿಭಾಗದಲ್ಲಿ ಕಳೆದ 3 ವರ್ಷಗಳಿಂದ ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ನೋಂದಣಿಯಾದ ಕಾರ್ಮಿಕರ ವಿವರ ಈ ಕೆಳಕಂಡಂತಿವೆ. |

| ಕ್ರ. ಸಂ. | ಯೋಜನೆ/ಕಾರ್ಯಕ್ರಮ | ನೋಂದಣಿಯಾದ ಕಾರ್ಮಿಕರ ಸಂಖ್ಯೆ | | |
|---|---|---|---|---|
| | | 2023-24 | 2024-2025 | 2025-26 |
| 01 | ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ | 9318 | 61041 | 1377 |
| 02 | ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ | 229 | 167 | 91 |
| 03 | ಕರ್ನಾಟಕ ರಾಜ್ಯ ದಿನಪತ್ರಿಕೆ ಹಾಗೂ ಹಾಲು ವಿತರಣಾ ಕಾರ್ಮಿಕರ | 0 | 98 | 8 |

| | | | | | | |
|---|---|---|---|---|---|---|
| | | | ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ಯೋಜನೆ | | | |
| | | 4 | ಕರ್ನಾಟಕ ರಾಜ್ಯ ಮೋಟಾರು ಸಾರಿಗೆ ಹಾಗೂ ಇತರೆ ಸಂಬಂದಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಮಂಡಳಿ.(ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ನೀಡಲಾಗುವುದು | **0** | **34898** | **1861** |

| | | |
|---|---|---|
| ಆ) | ಇನ್ನೂ ಎಷ್ಟು ಕಾರ್ಮಿಕರು ನೋಂದಣಿ ಮಾಡಿ ಕೊಂಡಿರುವುದಿಲ್ಲ; ನೋಂದಣಿಗಾಗಿ ಎಷ್ಟು ಅರ್ಜಿ ಬಂದಿರುತ್ತದೆ? (ವಿವರ ನೀಡುವುದು) | • ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಣಿ ಮಾಡಿಕೊಳ್ಳದ ಕಾರ್ಮಿಕರ ಅಂಕಿ ಅಂಶವು ಲಭ್ಯವಿರುವುದಿಲ್ಲ. ನೋಂದಣಿಗಾಗಿ ಒಟ್ಟು 14.516 ಅರ್ಜಿಗಳು ಸ್ವೀಕೃತಗೊಂಡಿರುತ್ತವೆ.<br>• ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯಲ್ಲಿ ಅಸಂಘಟಿತ ಕಾರ್ಮಿಕರ ಸಂಖ್ಯೆಗೆ ಸಂಬಂಧಿಸಿದಂತೆ, ಈವರೆಗೆ ಕಾರ್ಮಿಕ ಇಲಾಖೆಯಿಂದ ಯಾವುದೇ ಸಮೀಕ್ಷೆ ನಡೆಸಿರುವುದಿಲ್ಲ. ಆದ್ದರಿಂದ, ನೋಂದಣಿಯಿಂದ ವಂಚಿತರಾದ ಕಾರ್ಮಿಕರ ಮಾಹಿತಿ ಲಭ್ಯವಿರುವುದಿಲ್ಲ. ಮಂಡಳಿಯು ಜಾರಿಗೊಳಿಸುತ್ತಿರುವ ಯೋಜನೆಗಳಡಿ ksuwssb.karnataka.gov.in ಆನ್‌ಲೈನ್ ಪೋರ್ಟಲ್ ಮೂಲಕ ಅರ್ಹ ಕಾರ್ಮಿಕರು ಸ್ವಯಂ ನೋಂದಣಿ ಮಾಡಿಕೊಳ್ಳಬಹುದಾಗಿರುತ್ತದೆ. ಯಾವುದೇ ಕಾರ್ಮಿಕನು ಯೋಜನೆಗಳ ವ್ಯಾಪ್ತಿಯಿಂದ ಹೊರಗುಳಿಯದಂತೆ ಸ್ವಯಂ ನೋಂದಣಿಯ ಕುರಿತು ಕಾರ್ಮಿಕರಲ್ಲಿ ಅರಿವು ಮೂಡಿಸಿ ಹೆಚ್ಚಿನ ನೋಂದಣಿ ಮಾಡಿಸಲು ಕ್ರಮಕೈಗೊಳ್ಳಲಾಗುತ್ತಿದೆ.<br>ಮಂಡಳಿಯು ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಅಸಂಘಟಿತ ಕಾರ್ಮಿಕರಿಂದ ನೋಂದಣಿಗಾಗಿ ಸ್ವೀಕರಿಸಲಾದ ಎಲ್ಲಾ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದ್ದು, ಯಾವುದೇ ಅರ್ಜಿಗಳು ಬಾಕಿ ಇರುವುದಿಲ್ಲ. |
| ಇ) | ಕಳೆದ 3 ವರ್ಷಗಳಿಂದ ಎಷ್ಟು ಜನ ಕಾರ್ಮಿಕರು ಸೌಲಭ್ಯವನ್ನು ಪಡೆದಿದ್ದಾರೆ? | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ವಿವಿಧ ಮಂಡಳಿಗಳ ಮೂಲಕ ಜಾರಿಗೊಳಿಸುತ್ತಿರುವ ಯೋಜನೆಗಳಡಿ ಕಳೆದ 3 ವರ್ಷಗಳಿಂದ ಕಾರ್ಮಿಕರು ಸೌಲಭ್ಯ ಪಡೆದಿರುವ ವಿವರ ಈ ಕೆಳಕಂಡಂತಿದೆ |

| | |
|---|---|
| (ವರ್ಷವಾರು ವಿವರ ನೀಡುವುದು) | **ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ.**<br>ಈ ಮಂಡಳಿಯಲ್ಲಿ ಕಳೆದ 3 ವರ್ಷಗಳಲ್ಲಿ ದಕ್ಷಿಣ ಜಿಲ್ಲಾ ವ್ಯಾಪ್ತಿಯಲ್ಲಿ **36,355** ನೋಂದಾಯಿತ ಕಾರ್ಮಿಕರು ವಿವಿಧ ಸಹಾಯಧನ ಸೌಲಭ್ಯಗಳಡಿ ಸೌಲಭ್ಯ ಪಡೆದುಕೊಂಡಿರುತ್ತಾರೆ. ವರ್ಷವಾರು ವಿವರವನ್ನು **ಅನುಬಂಧ-01** ಒದಗಿಸಿದೆ.<br>**ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ**<br>ಈ ಮಂಡಳಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ, ಮಂಡಳಿಯು ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ಕಳೆದ 3 ವರ್ಷಗಳಲ್ಲಿ ಸೌಲಭ್ಯ ಪಡೆದ ಕಾರ್ಮಿಕರ ಸಂಖ್ಯೆ ಈ ಕೆಳಗಿನಂತಿದೆ. |

| **ಕ್ರ. ಸಂ.** | **ಯೋಜನೆ/ಕಾರ್ಯಕ್ರಮ** | **ಫಲಾನುಭವಿಗಳ ಸಂಖ್ಯೆ** | | |
|---|---|---|---|---|
| | | **2023-24** | **2024-2025** | **2025-26** |
| 01 | ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ | 0 | 0 | 2 |
| 02 | ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ | 0 | 1 | 1 |
| 03 | ಕರ್ನಾಟಕ ರಾಜ್ಯ ದಿನಪತ್ರಿಕೆ ಹಾಗೂ ಹಾಲು ವಿತರಣಾ ಕಾರ್ಮಿಕರ ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ಯೋಜನೆ | 0 | 98 | 8 |
| 04 | ಕರ್ನಾಟಕ ರಾಜ್ಯ ಮೋಟಾರು ಸಾರಿಗೆ ಹಾಗೂ ಇತರೆ ಸಂಬಂದಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಮಂಡಳಿ.(ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ನೀಡಲಾಗುವುದು | 14 | 12 | 11 |
| | **ಶೈಕ್ಷಣಿಕ ಧನಸಹಾಯ** | 15 | 17 | 15 |

| | | |
|---|---|---|
| | | **ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ**<br><br>ಈ ಮಂಡಳಿಯಲ್ಲಿ ಕಳೆದ 3 ವರ್ಷಗಳಿಂದ ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ಈ ಮಂಡಳಿಯಿಂದ ವಿವಿಧ ಕಲ್ಯಾಣ ಯೋಜನೆಗಳಡಿ ಸಂಘಟಿತ ಕಾರ್ಮಿಕರು ಹಾಗೂ ಅವರ ಅವಲಂಭಿತರಿಗೆ ನೀಡಿರುವ ಸೌಲಭ್ಯಗಳ ವರ್ಷಾವರು ವಿವರವನ್ನು **ಅನುಬಂಧ-2** ರಲ್ಲಿ ಒದಗಿಸಿದೆ. |
| ಈ) | ಕಳೆದ 3 ವರ್ಷಗಳಿಂದ ಸರ್ಕಾರದ ಸೌಲಭ್ಯ ಪಡೆಯಲು ಮನವಿ ಮಾಡಿದ್ದರೂ, ಯಾವ ಕಾರಣಗಳಿಂದ ಇದುವರೆಗೂ ಸೌಲಭ್ಯ ದೊರಕಿರುವುದಿಲ್ಲ? (ವಿವರ ನೀಡುವುದು) | • ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ಕ್ರಮೀಕರಣ ಮತ್ತು ಸೇವಾ ಷರತ್ತುಗಳ ಕಾಯ್ದೆ 1996 ಮತ್ತು ಕರ್ನಾಟಕ ನಿಯಮಗಳು 2006 ರಂತೆ ಸ್ವೀಕೃತಗೊಳ್ಳುವ ಎಲ್ಲಾ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ ವಿಲೇವಾರಿ ಮಾಡಲಾಗುತ್ತಿದೆ. ತಿರಸ್ಕೃತವಾಗುವ ಅರ್ಜಿಗಳ ಕಾರಣಗಳ ಪಟ್ಟಿಯನ್ನು **ಅನುಬಂಧ-03** ರಲ್ಲಿ ಒದಗಿಸಿದೆ.<br><br>• ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ನೋಂದಾಯಿತ ಕಾರ್ಮಿಕರು ಸೌಲಭ್ಯಗಳನ್ನು ಕೋರಿ ಸಲ್ಲಿಸಲಾದ ಮನವಿಗಳನ್ನು ಯೋಜನೆಗಳ ಮಾರ್ಗಸೂಚಿಯ ಷರತ್ತು ಪೂರೈಸಿದ ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದ್ದು, ಯಾವುದೇ ಮನವಿ ಬಾಕಿ ಇರುವುದಿಲ್ಲ.<br><br>ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಕಳೆದ 3 ವರ್ಷಗಳಿಂದ ಈ ಮಂಡಳಿಗೆ ಸೌಲಭ್ಯ ಪಡೆಯಲು ಮನವಿ ಸಲ್ಲಿಸಿರುವ ಎಲ್ಲಾ ಫಲಾನುಭವಿಗಳಿಗೆ ಸೌಲಭ್ಯವನ್ನು ನೀಡಲಾಗಿದೆ |

**ಕಾಇ 462 ಎಲ್‌ಇಟಿ 2026**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**

# ಅನುಬಂಧ-01

## ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ.

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೌಲಭ್ಯ ಪಡೆದ ಫಲಾನುಭವಿಗಳ ವರ್ಷವಾರು ವಿವರ

| ಕ್ರ. ಸಂ. | ಸೌಲಭ್ಯದ ಹೆಸರು | ಫಲಾನುಭವಿಗಳ ಸಂಖ್ಯೆ | | |
|---|---|---|---|---|
| | | **2023-24** | **2024-25** | **2025-26** |
| 1 | ಅಪಘಾತ ಪರಿಹಾರ | 8 | 16 | 16 |
| 2 | ಪ್ರಮುಖ ವೈದ್ಯಕೀಯ | 42 | 41 | 77 |
| 3 | ದುರ್ಬಲತೆ ಪಿಂಚಣಿ ಮುಂದುವರಿಕೆ | 0 | 0 | 1 |
| 4 | ಪಿಂಚಣಿ ಮುಂದುವರಿಕೆ | 0 | 859 | 2471 |
| 5 | ಹೆರಿಗೆ ಸಹಾಯಧನ | 5 | 4 | 9 |
| 6 | ದುರ್ಬಲತೆ ಪಿಂಚಣಿ ಮತ್ತು ಅನುಗ್ರಹ ರಾಶಿ | 0 | 1 | 4 |
| 7 | ಮರಣ ಸಹಾಯಧನ ಮತ್ತು ಅನುಗ್ರಹ ರಾಶಿ | 144 | 212 | 323 |
| 8 | ಮದುವೆ ಸಹಾಯಧನ | 777 | 686 | 1140 |
| 9 | ವೈದ್ಯಕೀಯ ಸಹಾಯಧನ | 5 | 10 | 18 |
| 10 | ಪಿಂಚಣಿ ಸಹಾಯಧನ | 204 | 449 | 1041 |
| 11 | ತಾಯಿ ಮಗು ಸಹಾಯ ಹಸ್ತ | 1 | 0 | 1 |
| 12 | ಶೈಕ್ಷಣಿಕ ಸಹಾಯಧನ | 9497 | 6137 | 12156 |
| | ಒಟ್ಟು | **10,683** | **8,415** | **17,257** |

**ಅನುಬಂಧ-2**

ಕಳೆದ 3 ವರ್ಷಗಳಿಂದ ದಕ್ಷಿಣ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯಿಂದ ವಿವಿಧ ಕಲ್ಯಾಣ ಯೋಜನೆಗಳಡಿ ಸಂಘಟಿತ ಕಾರ್ಮಿಕರು ಹಾಗೂ ಅವರ ಅವಲಂಭಿತರಿಗೆ ನೀಡಿರುವ ಸೌಲಭ್ಯಗಳ ವರ್ಷಾವರು ವಿವರ ಈ ಕೆಳಕಂಡಂತಿವೆ.

| ಕ್ರ. ಸ | ಯೋಜನೆಯ ವಿವರ | 2023-24 | | 2024-25 | | 2025-26 | |
|---|---|---|---|---|---|---|---|
| | | ಫಲಾನುಭವಿಗಳ ಸಂಖ್ಯೆ | ನೀಡಿರುವ ಧನ ಸಹಾಯ ಮೊತ್ತ | ಫಲಾನುಭವಿಗಳ ಸಂಖ್ಯೆ | ನೀಡಿರುವ ಧನ ಸಹಾಯ ಮೊತ್ತ | ಫಲಾನುಭವಿಗಳ ಸಂಖ್ಯೆ | ನೀಡಿರುವ ಧನ ಸಹಾಯ ಮೊತ್ತ |
| 1 | ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ | 2078 | 20992000 | 2163 | 22140000 | 2082 | 19260000 |
| 2 | ವೈದ್ಯಕೀಯ ನೆರವು | 0 | 0 | 0 | 0 | 02 | 50000 |
| 3 | ಮೃತ ಕಾರ್ಮಿಕರ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ | 14 | 140000 | 18 | 180000 | 11 | 200000 |
| 4 | ಕಾರ್ಮಿಕರ ಅಪಘಾತ ಧನ ಸಹಾಯ | 0 | 0 | 0 | 0 | 0 | 0 |
| 5 | ವೈದ್ಯಕೀಯ ತಪಾಸಣಾ ಶಿಬಿರ | 0 | 0 | 0 | 0 | 0 | 0 |
| 6 | ವಾರ್ಷಿಕ ಕ್ರೀಡಾ ಚಟುವಟಿಕೆ | 0 | 0 | 0 | 0 | 0 | 0 |
| 7 | ಮಹಿಳಾ ಕಾರ್ಮಿಕರಿಗೆ ಹೆರಿಗೆ ಭತ್ಯ ಸೌಲಭ್ಯ | 28 | 280000 | 74 | 740000 | 96 | 960000 |
| **ಒಟ್ಟು** | | **2120** | **21412000** | **2255** | **23060000** | **2191** | **20470000** |

ಅನುಬಂಧ-03

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ.

# ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೌಲಭ್ಯಕ್ಕಾಗಿ ಅರ್ಜಿ ಸಲ್ಲಿಸಿದ ಪ್ರಕರಣಗಳಲ್ಲಿ ಅರ್ಜಿ ತಿರಸ್ಕೃತವಾಗಲು ಕಾರಣಗಳ ವಿವರ

| ಕ್ರ. ಸಂ | ಸೌಲಭ್ಯಗಳ ವಿವರ | ತಿರಸ್ಕೃತಗೊಳ್ಳುವುದಕ್ಕೆ ಕಾರಣಗಳು |
|---|---|---|
| 01 | ಅಪಘಾತ ಮರಣ ಪರಿಹಾರ | 1. 60 ವರ್ಷ ಪೂರ್ಣಗೊಂಡನಂತರ ಅರ್ಜಿ ಸಲ್ಲಿಸಿರುತ್ತಾರೆ<br>2. ಸ್ವಯಂ ದೃಢೀಕರಣ/ಘೋಷಣಾ ಪತ್ರ ಸಲ್ಲಿಸಿರುವುದಿಲ್ಲ.<br>3. ಉದ್ಯೋಗ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲ.<br>4. ಉದ್ಯೋಗ ಪ್ರಮಾಣ ಪತ್ರದಲ್ಲಿ ಎಲ್ಲಾ ಕಾಲಂಗಳನ್ನು ಪೂರ್ಣ ವಿವರಗಳೊಂದಿಗೆ ಭರ್ತಿ ಮಾಡಿರುವುದಿಲ್ಲ.<br>5. ಸ್ವಯಂ ದೃಢೀಕರಣ/ಘೋಷಣಾ ಪತ್ರದಲ್ಲಿ ಎಲ್ಲಾ ಕಾಲಂಗಳನ್ನು ಪೂರ್ಣ ವಿವರಗಳೊಂದಿಗೆ ಭರ್ತಿ ಮಾಡಿರುವುದಿಲ್ಲ.<br>6. ಅರ್ಜಿದಾರರ ಪ್ರಸ್ತುತ ವಿಳಾಸ ಸ್ಥಳ ಪರಿಶೀಲನೆಗಾಗಿ ತೆರಳಿದಾಗ ವಿಳಾಸ ಪತ್ತೆಯಾಗಿರುವುದಿಲ್ಲ.<br>7. ಇದೇ ಪ್ರಕರಣ ಈಗಾಗಲೇ ಅರ್ಜಿ ಸಲ್ಲಿಸಲಾಗಿದೆ.<br>8. ಪರಿಶೀಲನೆಯಿಂದ ನಿಯಮ 47(2) (ಎ) & (ಬಿ) ರಲ್ಲಿ ನಿಗದಿಪಡಿಸಿರುವಂತಹ ಮರಣವಾಗಿರುತ್ತದೆ ಎಂದು ಕಂಡು ಬಂದಿರುತ್ತದೆ.<br>9. ಅಘಘಾತ ಮರಣವೆಂದು ಪ್ರಮಾಣೀಕರಿಸಲು ಎಫ್ಐಆರ್ ಸಲ್ಲಿಸಿರುವುದಿಲ್ಲ.<br>10. ಶವ ಪರೀಕ್ಷಾ ವರದಿ ಸಲ್ಲಿಸಿರುವುದಿಲ್ಲ. (Post Mortem).<br>11. ನಿಯಮ ೪೯ (ಸಿ) ರಡಿ ನಿಗದಿಪಡಿಸಿರುವ ಕಾಲಮಿತಿಯೊಳಗೆ ಅರ್ಜಿ ಸಲ್ಲಿಸಿರುವುದಿಲ್ಲ.<br>12. ನಾಮನಿರ್ದೇಶಿತರು ಅರ್ಜಿ ಸಲ್ಲಿಸಿರುವುದಿಲ್ಲ<br>13. ನವೀಕರಣ ಮುಕ್ತಾಯಗೊಂಡ ೧ ವರ್ಷದ ಗ್ರೇಸ್ ಅವಧಿ ಸಹ ಮುಕ್ತಾಯಗೊಂಡ ನಂತರ ಅರ್ಜಿ ಸಲ್ಲಿಸಲಾಗಿದೆ.<br>14. ಮರಣ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲ.<br>15. ಪರಿಶೀಲನೆಯಿಂದ ಫಲಾನುಭವಿಯು ಕಟ್ಟಡ ಮತ್ತು ಇತರ ನಿರ್ಮಾಣ ಕೆಲಸ ನಿರ್ವಹಿಸಿರುವುದಿಲ್ಲವೆಂದು ತಿಳಿದು ಬಂದಿರುತ್ತದೆ.<br>16. ಅರ್ಜಿ ಪರಿಶೀಲನೆಗಾಗಿ ವಾಸ ಸ್ಥಳ ವಿವರ ಪತ್ತೆಯಾಗಿರುವುದಿಲ್ಲ.<br>17. ನಾಮ ನಿರ್ದೇಶಿತರ ವಿವರಗಳು ಅಪೂರ್ಣಗೊಂಡಿರುತ್ತದೆ. |
| 02 | ಪ್ರಮುಖ ವೈದ್ಯಕೀಯ ವೆಚ್ಚ ಮರುಪಾವತಿ | 1. ನಿಯಮ 49(ಸಿ)ರಡಿ ನಿಗದಿಪಡಿಸಿರುವ ಕಾಲಮಿತಿಯಲ್ಲಿ ಅರ್ಜಿ ಸಲ್ಲಿಸಿರುವುದಿಲ್ಲ.<br>2. 64 ವರ್ಷ ಪೂರ್ಣಗೊಂಡನಂತರ ಅರ್ಜಿ ಸಲ್ಲಿಸಿರುತ್ತಾರೆ<br>3. ಉದ್ಯೋಗ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲ.<br>4. ಫಾರಂ 22(A)ಸಲ್ಲಿಸಿರುವುದಿಲ್ಲ<br>5. ಅರ್ಜಿದಾರರ ಪ್ರಸ್ತುತ ವಿಳಾಸ ಸ್ಥಳ ಪರಿಶೀಲನೆಗಾಗಿ ತೆರಳಿದಾಗ ವಿಳಾಸ ಪತ್ತೆಯಾಗಿರುವುದಿಲ್ಲ. |

| | | |
|---|---|---|
| | | 6. ಸಿಜಿಹೆಚ್‌ಎಸ್ ದರಗಳನ್ವಯ ಚಿಕಿತ್ಸಾ ದರಗಳನ್ನು ವೈಧ್ಯದಿಕಾರಿಗಳಿಂದ ಪರಿಶೀಲಿಸಲು ಚಿಕಿತ್ಸೆಯ ಮೂಲಕ ಬಿಲ್ಲುಗಳನ್ನು ಕಛೇರಿಗೆ ಸಲ್ಲಿಸಿರುವುದಿಲ್ಲ.<br>7. ಇದೇ ಪ್ರಕರಣ ಈಗಾಗಲೇ ಅರ್ಜಿ ಸಲ್ಲಿಸಲಾಗಿದೆ.<br>8. ನಿಯಮ ೪೮ರಲ್ಲಿ ನಿಗದಿಪಡಿಸಿರುವಂತೆ ಸರ್ಕಾರದ ಮಾನ್ಯತೆ ಪಡೆದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ.<br>9. ನಿಯಮ 48 ರಲ್ಲಿ ಸೇರಿಸಲಾಗಿರುವ ಪ್ರಮುಖ ಕಾಯಿಲೆಗಳ ಪಟ್ಟಿಯಲ್ಲಿ ಚಿಕಿತ್ಸೆ ಪಡೆಯಲಾದ ಕಾಯಿಲೆಯು ಇರುವುದಿಲ್ಲ.<br>10. ಪ್ರಮುಖ ವೈದ್ಯಕೀಯ ಧನಸಹಾಯ ಕೋರಲಾಗಿರುವ ಅವಲಂಭಿತರು ಮಂಡಳಿಯು ನಿಯಮ 2(ಪಿ) 1 ರಲ್ಲಿ ವ್ಯಾಖ್ಯಾನಿಸಿರುವ 'ಅವಲಂಭಿತರು' ವ್ಯಾಖ್ಯಾನದಡಿ ಬರುವುದಿಲ್ಲ.<br>11. ನೋಂದಾಯಿತ ಫಲಾನುಭವಿಯ ಸದಸ್ಯತ್ವವು ನವೀಕರಣಗೊಂಡಿರುವುದಿಲ್ಲ.<br>12. ಉದ್ಯೋಗ ಪ್ರಮಾಣ ಪತ್ರದಲ್ಲಿ ಎಲ್ಲಾ ಕಾಲಂಗಳನ್ನು ಪೂರ್ಣ ವಿವರಗಳೊಂದಿಗೆ ಭರ್ತಿ ಮಾಡಿರುವುದಿಲ್ಲ.<br>13. ಸ್ವಯಂ ದೃಢೀಕರಣ/ಘೋಷಣಾ ಪತ್ರದಲ್ಲಿ ಎಲ್ಲಾ ಕಾಲಂಗಳನ್ನು ಪೂರ್ಣ ವಿವರಗಳೊಂದಿಗೆ ಭರ್ತಿ ಮಾಡಿರುವುದಿಲ್ಲ.<br>14. ಫಲಾನುಭವಿಯ ಕಾರ್ಮಿಕರ ಗುರುತಿನ ಚೀಟಿಯಲ್ಲಿ ಅವಲಂಭಿತರ ವಿವರ ಇರುವುದಿಲ್ಲ<br>15. ಅರ್ಜಿ ಪರಿಶೀಲನೆಗಾಗಿ ವಾಸ ಸ್ಥಳ ವಿವರ ಪತ್ತೆಯಾಗಿರುವುದಿಲ್ಲ. |
| 03 | ಹೆರಿಗೆ ಸಹಾಯಧನ | 1. ಈಗಾಗಲೇ ಎರಡು ಹೆರಿಗೆಗಳಿಗೆ ಧನಸಹಾಯ ಪಡೆಯಲಾಗಿದೆ.<br>2. ಮೂರನೇ ಮಗುವಿಗೆ ಧನ ಸಹಾಯ ಕೋರಲಾಗಿದೆ.<br>3. ಮಗುವಿನ ಜನನ ಪ್ರಮಾಣ ಪತ್ರ ಲಗತ್ತಿಸಿರುವುದಿಲ್ಲ.<br>4. ಎಷ್ಟನೇ ಮಗು ಎಂಬುದಕ್ಕೆ ಸೂಕ್ತ ದಾಖಲೆ ನೀಡಿರುವುದಿಲ್ಲ.<br>5. ನಿಯಮ 49 (ಸಿ) ರಡಿ ನಿಗದಿಪಡಿಸಿರುವ ಕಾಲಮಿತಿಯೊಳಗೆ ಅರ್ಜಿ ಸಲ್ಲಿಸಿರುವುದಿಲ್ಲ.<br>6. ಉದ್ಯೋಗ ಪ್ರಮಾಣ ಪತ್ರದಲ್ಲಿ ಎಲ್ಲಾ ಕಾಲಂಗಳನ್ನು ಪೂರ್ಣ ವಿವರಗಳೊಂದಿಗೆ ಭರ್ತಿ ಮಾಡಿರುವುದಿಲ್ಲ.<br>7. ಸ್ವಯಂ ದೃಢೀಕರಣ/ಘೋಷಣಾ ಪತ್ರ ಸಲ್ಲಿಸಿರುವುದಿಲ್ಲ.<br>8. ಸ್ವಯಂ ದೃಢೀಕರಣ/ಘೋಷಣಾ ಪತ್ರದಲ್ಲಿ ಎಲ್ಲಾ ಕಾಲಂಗಳನ್ನು ಪೂರ್ಣ ವಿವರಗಳೊಂದಿಗೆ ಭರ್ತಿ ಮಾಡಿರುವುದಿಲ್ಲ.<br>9. ಪರಿಶೀಲನೆಯಿಂದ ಫಲಾನುಭವಿಯು ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸ ನಿರ್ವಹಿಸಿರುವುದಿಲ್ಲವೆಂದು ತಿಳಿದು ಬಂದಿರುತ್ತದೆ.<br>10. ನೋಂದಾಯಿತ ಫಲಾನುಭವಿಯ ಸದಸ್ಯತ್ವವುನವೀಕರಣ ಗೊಂಡಿರುವುದಿಲ್ಲ.<br>11. ಇದೇ ಪ್ರಕರಣ ಈಗಾಗಲೇ ಅರ್ಜಿ ಸಲ್ಲಿಸಲಾಗಿದೆ.<br>12. ಉದ್ಯೋಗ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲ.<br>13. ಅರ್ಜಿದಾರರ ಪ್ರಸ್ತುತ ವಿಳಾಸ ಸ್ಥಳ ಪರಿಶೀಲನೆಗಾಗಿ ತೆರಳಿದಾಗ ವಿಳಾಸ ಪತ್ತೆಯಾಗಿರುವುದಿಲ್ಲ. |

| | | |
|---|---|---|
| | | 14. 69 ವರ್ಷ ಪೂರ್ಣಗೊಂಡನಂತರ ಅರ್ಜಿ ಸಲ್ಲಿಸಿರುತ್ತಾರೆ<br>15. ಅರ್ಜಿದಾರರು ಕಟ್ಟಡ ಕಾರ್ಮಿಕರ ಗುರುತಿನ ಚೀಟಿ ಪಡೆಯುವ ಮೊದಲೇ ಮಗುವಿಗೆ ಜನ್ಮ ನೀಡಿರುತ್ತಾರೆ. |
| 04 | ದುರ್ಬಲತೆ ಪಿಂಚಣಿ | 1. ಇದೇ ಪ್ರಕರಣ ಈಗಾಗಲೇ ಅರ್ಜಿ ಸಲ್ಲಿಸಲಾಗಿದೆ.<br>2. 66 ವರ್ಷ ಪೂರ್ಣಗೊಂಡನಂತರ ಅರ್ಜಿ ಸಲ್ಲಿಸಿರುತ್ತಾರೆ<br>3. ಉದ್ಯೋಗ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲ.<br>4. ಅರ್ಜಿದಾರರ ಪ್ರಸ್ತುತ ವಿಳಾಸ ಸ್ಥಳ ಪರಿಶೀಲನೆಗಾಗಿ ತೆರಳಿದಾಗ ವಿಳಾಸ ಪತ್ತೆಯಾಗಿರುವುದಿಲ್ಲ<br>5. ಕೆಲಸ ಸ್ಥಳದಲ್ಲಿ ಅಘಘಾತದಿಂದ ದುರ್ಬಲತೆ ಉಂಟಾಗಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ.<br>6. ಮಂಡಳಿಯು ನಿರ್ದಿಷ್ಟಪಡಿಸಿರುವ ರೋಗಗಳಿಂದ ದುರ್ಬಲತೆಯಾಗಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಸಲ್ಲಿಸಿರುವುಲ್ಲ/ ಮಂಡಳಿಯು ನಿರ್ದಿಷ್ಟಪಡಿಸಿರುವ ರೋಗಗಳಾದ ಪಾರ್ಶ್ವವಾಯು, ಕ್ಯಾನ್ಸರ್, ಕುಷ್ಠರೋಗದಿಂದ ದುರ್ಬಲತೆ ಉಂಟಾಗಿರುವುದಿಲ್ಲ.<br>7. ವಿಕಲಚೇತನ ಕಲ್ಯಾಣ ಮಂಡಳಿಯಿಂದ ನೀಡಿರುವ ಪ್ರಮಾಣ ಪತ್ರವನ್ನು ಸಲ್ಲಿಸಿರುವುದಿಲ್ಲ.<br>8. ವಿಕಲಚೇತನ ಪ್ರಮಾಣ ಪತ್ರ ಪಡೆದ 6 ತಿಂಗಳ ಒಳಗಾಗಿ ಅರ್ಜಿ ಸಲ್ಲಿಸಿರುವುದಿಲ್ಲ.<br>9. ಉದ್ಯೋಗ ಪ್ರಮಾಣ ಪತ್ರದಲ್ಲಿ ಎಲ್ಲಾ ಕಾಲಂಗಳನ್ನು ಪೂರ್ಣ ವಿವರಗಳೊಂದಿಗೆ ಭರ್ತಿ ಮಾಡಿರುವುದಿಲ್ಲ.<br>10. ಸ್ವಯಂ ದೃಢೀಕರಣ/ಘೋಷಣಾ ಪತ್ರ ಸಲ್ಲಿಸಿರುವುದಿಲ್ಲ.<br>11. ಸ್ವಯಂ ದೃಢೀಕರಣ/ಘೋಷಣಾ ಪತ್ರದಲ್ಲಿ ಎಲ್ಲಾ ಕಾಲಂಗಳನ್ನು ಪೂರ್ಣ ವಿವರಗಳೊಂದಿಗೆ ಭರ್ತಿ ಮಾಡಿರುವುದಿಲ್ಲ.<br>12. ಪರಿಶೀಲನೆಯಿಂದ ಫಲಾನುಭವಿಯು ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸ ನಿರ್ವಹಿಸಿರುವುದಿಲ್ಲವೆಂದು ತಿಳಿದು ಬಂದಿರುತ್ತದೆ.<br>13. ಅರ್ಜಿ ಪರಿಶೀಲನೆಗಾಗಿ ವಾಸ ಸ್ಥಳ ವಿವರ ಪತ್ತೆಯಾಗಿರುವುದಿಲ್ಲ.<br>14. ನೋಂದಾಯಿತ ಫಲಾನುಭವಿಯ ಸದಸ್ಯತ್ವವು ನವೀಕರಣಗೊಂಡಿರುವುದಿಲ್ಲ. |
| 05 | ಶೈಕ್ಷಣಿಕ ಸಹಾಯಧನ | 1. 60 ವರ್ಷ ಪೂರ್ಣಗೊಂಡನಂತರ ಅರ್ಜಿ ಸಲ್ಲಿಸಿರುತ್ತಾರೆ<br>2. ಇದೇ ಪ್ರಕರಣ ಈಗಾಗಲೇ ಅರ್ಜಿ ಸಲ್ಲಿಸಲಾಗಿದೆ.<br>3. ಉದ್ಯೋಗ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲ.<br>4. ಫಲಾನುಭವಿಯ ಕಾರ್ಮಿಕರ ಗುರುತಿನ ಚೀಟಿಯಲ್ಲಿ ಮಕ್ಕಳ ವಿವರ ಇರುವುದಿಲ್ಲ.<br>5. ಪರಿಶೀಲನೆಯಿಂದ ಅರ್ಜಿದಾರರು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಾಗಿರುವುದಿಲ್ಲವೆಂದು ಕಂಡು ಬಂದಿರುತ್ತದೆ.<br>6. ನೋಂದಾಯಿತ ಫಲಾನುಭವಿಯ ಸದಸ್ಯತ್ವವು ನವೀಕರಣಗೊಂಡಿರುವುದಿಲ್ಲ. |

| | | |
|---|---|---|
| | | 7. ಶೈಕ್ಷಣಿಕ ಸಹಾಯಧನ ಕೋರಲಾದ ಫಲಾನುಭವಿಯ ಮಗ/ಮಗಳು ಪ್ರಸಕ್ತ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿಲ್ಲ.<br>8. ಪರಿಶೀಲನೆಯಿಂದ ಅರ್ಜಿದಾರರು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರಾಗಿರುವುದಿಲ್ಲವೆಂದು ಕಂಡು ಬಂದಿರುತ್ತದೆ.<br>9. ಈಗಾಗಲೇ ಅರ್ಜಿದಾರರ 2 ಮಕ್ಕಳಿಗೆ ಸಹಾಯಧನ ಕೋರಿ ಅರ್ಜಿ ಸಲ್ಲಿಸಲಾಗಿದೆ.<br>10. ಗಂಡ ಹಾಗೂ ಹೆಂಡತಿ ಇಬ್ಬರು ನೋಂದಾಯಿತ ಫಲಾನುಭವಿಗಳಾಗಿದ್ದು, ಇಬ್ಬರು ಅದೇ ಮಕ್ಕಳಿಗೆ ಮತ್ತೊಮ್ಮೆ ಶೈಕ್ಷಣಿಕ ಧನಸಹಾಯಕ್ಕಾಗಿ ಅರ್ಜಿ ಸಲ್ಲಿಸಿರುತ್ತೀರಿ.<br>11. ದೂರ ಶಿಕ್ಷಣ ವಿದ್ಯಾಭ್ಯಾಸಕ್ಕೆ ಈ ಧನಸಹಾಯ ಪಡೆಯಲು ಅರ್ಹರಿರುವುದಿಲ್ಲ ಹಿಂದಿನ ವರ್ಷ ಫಲಾನುಭವಿ ನೋಂದಾಯಿತ ಅರ್ಹತಾ ಅವಧಿಯನ್ನು ಪೂರ್ಣಗೊಳಿಸಿಲ್ಲ<br>12. ಅರ್ಜಿಯಲ್ಲಿ ಪೂರ್ಣ ವಿವರ ನಮೂದಿಸಿಲ್ಲ. ಉದ್ಯೋಗ ಪ್ರಮಾಣ ಪತ್ರದಲ್ಲಿ ಎಲ್ಲಾ ಕಾಲಂಗಳನ್ನು ಪೂರ್ಣ ವಿವರಗಳೊಂದಿಗೆ ಭರ್ತಿ ಮಾಡಿರುವುದಿಲ್ಲ.<br>13. ಸ್ವಯಂ ದೃಢೀಕರಣ/ಘೋಷಣಾ ಪತ್ರ ಸಲ್ಲಿಸಿರುವುದಿಲ್ಲ. ಸ್ವಯಂ ದೃಢೀಕರಣ/ಘೋಷಣಾ ಪತ್ರದಲ್ಲಿ ಎಲ್ಲಾ ಕಾಲಂಗಳನ್ನು ಪೂರ್ಣ ವಿವರಗಳೊಂದಿಗೆ ಭರ್ತಿ ಮಾಡಿರುವುದಿಲ್ಲ.<br>14. ಮಗ/ಮಗಳ ಸ್ಯಾಟ್ ಐಡಿ ವಿವರ/ಸ್ಟೂಡೆಂಟ್ ಐಡಿ ವಿವರ ಫೇಚ್ ಆಗಿರುವುದಿಲ್ಲ.<br>15. ಫಲಾನುಭವಿ ಹೆಸರು ಹಾಗೂ ಮಕ್ಕಳ ಹೆಸರುಗಳು ಶಾಲಾ ವಿವರಗಳೊಂದಿಗೆ ತಾಳೆ ಆಗಿರುವುದಿಲ್ಲ. |
| 06 | ಅಂತ್ಯಕ್ರಿಯೆಯ ವೆಚ್ಚ ಮತ್ತು ಅನುಗ್ರಹರಾಶಿ ಪರಿಹಾರ ಧನ | 1. 62 ವರ್ಷ ಪೂರ್ಣಗೊಂಡನಂತರ ಅರ್ಜಿ ಸಲ್ಲಿಸಿರುತ್ತಾರೆ.<br>2. ಅರ್ಜಿದಾರರ ಪ್ರಸ್ತುತ ವಿಳಾಸ ಸ್ಥಳ ಪರಿಶೀಲನೆಗಾಗಿ ತೆರಳಿದಾಗ ವಿಳಾಸ ಪತ್ತೆಯಾಗಿರುವುದಿಲ್ಲ ಅಥವಾ ಗುರುತಿಸಲು ಸಾಧ್ಯವಾಗಿರುವುದಿಲ್ಲ.<br>3. ನಾಮನಿರ್ದೇಶಿತರ ಆಧಾರ್ ಕಾರ್ಡ್ ಅನ್ನು ಸಲ್ಲಿಸಿರುವುದಿಲ್ಲ.<br>4. ಇದೇ ಪ್ರಕರಣ ಈಗಾಗಲೇ ಅರ್ಜಿ ಸಲ್ಲಿಸಲಾಗಿದೆ.<br>5. ನಿಯಮ 49 (ಸಿ) ನಿಗಧಿಪಡಿಸಿರುವ ಅವಧಿಯೊಳಗೆ ಅರ್ಜಿ ಸಲ್ಲಿಸಿರುವುದಿಲ್ಲ<br>6. ನಾಮನಿರ್ದೇಶಿತರು ಅರ್ಜಿ ಸಲ್ಲಿಸಿರುವುದಿಲ್ಲ.<br>7. ನವೀಕರಣ ಮುಕ್ತಾಯಗೊಂಡ ೧ ವರ್ಷದ ಗ್ರೇಸ್ ಅವಧಿ ಸಹ ಮುಕ್ತಾಯಗೊಂಡ ನಂತರ ಅರ್ಜಿ ಸಲ್ಲಿಸಲಾಗಿದೆ.<br>8. ಮರಣ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲ.<br>9. ಪರಿಶೀಲನೆಯಿಂದ ದಿವಂಗತ ಫಲಾನುಭವಿಯು ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸ ನಿರ್ವಹಿಸಿರುವುದಿಲ್ಲವೆಂದು ತಿಳಿದು ಬಂದಿರುತ್ತದೆ.<br>10. ಅರ್ಜಿ ಪರಿಶೀಲನೆಗಾಗಿ ವಾಸ ಸ್ಥಳ ವಿವರ ಪತ್ತೆಯಾಗಿರುವುದಿಲ್ಲ.<br>11. ನಾಮ ನಿರ್ದೇಶಿತರ ವಿವರಗಳು ಅಪೂರ್ಣಗೊಂಡಿರುತ್ತದೆ. |
| 07 | ತಾಯಿ ಮಗು ಸಹಾಯ ಹಸ್ತ | 1. ಈಗಾಗಲೇ ಎರಡು ಮಗುವಿಗೆ ಧನಸಹಾಯ ಪಡೆಯಲಾಗಿದೆ.<br>2. ಮೂರನೇ ಮಗುವಿಗೆ ಧನ ಸಹಾಯ ಕೋರಲಾಗಿದೆ.<br>3. ಮಗುವಿನ ಜನನ ಪ್ರಮಾಣ ಪತ್ರ ಲಗತ್ತಿಸಿರುವುದಿಲ್ಲ. |

| | | |
|---|---|---|
| | | 4. ಎಷ್ಟನೇ ಮಗು ಎಂಬುದಕ್ಕೆ ಸೂಕ್ತ ದಾಖಲೆ ನೀಡಿರುವುದಿಲ್ಲ.<br>5. ನಿಯಮ 49 (ಸಿ) ರಡಿ ನಿಗದಿಪಡಿಸಿರುವ ಕಾಲಮಿತಿಯೊಳಗೆ ಅರ್ಜಿ ಸಲ್ಲಿಸಿರುವುದಿಲ್ಲ.<br>6. ಉದ್ಯೋಗ ಪ್ರಮಾಣ ಪತ್ರದಲ್ಲಿ ಎಲ್ಲಾ ಕಾಲಂಗಳನ್ನು ಪೂರ್ಣ ವಿವರಗಳೊಂದಿಗೆ ಭರ್ತಿ ಮಾಡಿರುವುದಿಲ್ಲ.<br>7. ಸ್ವಯಂ ದೃಢೀಕರಣ/ಘೋಷಣಾ ಪತ್ರ ಸಲ್ಲಿಸಿರುವುದಿಲ್ಲ.<br>8. ಸ್ವಯಂ ದೃಢೀಕರಣ/ಘೋಷಣಾ ಪತ್ರದಲ್ಲಿ ಎಲ್ಲಾ ಕಾಲಂಗಳನ್ನು ಪೂರ್ಣ ವಿವರಗಳೊಂದಿಗೆ ಭರ್ತಿ ಮಾಡಿರುವುದಿಲ್ಲ.<br>9. ಪರಿಶೀಲನೆಯಿಂದ ಫಲಾನುಭವಿಯು ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸ ನಿರ್ವಹಿಸಿರುವುದಿಲ್ಲವೆಂದು ತಿಳಿದು ಬಂದಿರುತ್ತದೆ.<br>10. ಅರ್ಜಿ ಪರಿಶೀಲನೆಗಾಗಿ ವಾಸ ಸ್ಥಳ ವಿವರ ಪತ್ತೆಯಾಗಿರುವುದಿಲ್ಲ.<br>11. ನೋಂದಾಯಿತ ಫಲಾನುಭವಿಯ ಸದಸ್ಯತ್ವವು ನವೀಕರಣಗೊಂಡಿರುವುದಿಲ್ಲ.<br>12. ಇದೇ ಪ್ರಕರಣ ಈಗಾಗಲೇ ಅರ್ಜಿ ಸಲ್ಲಿಸಲಾಗಿದೆ.<br>13. ಉದ್ಯೋಗ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲ.<br>14. ಅರ್ಜಿದಾರರ ಪ್ರಸ್ತುತ ವಿಳಾಸ ಸ್ಥಳ ಪರಿಶೀಲನೆಗಾಗಿ ತೆರಳಿದಾಗ ವಿಳಾಸ ಪತ್ತೆಯಾಗಿರುವುದಿಲ್ಲ.<br>15. 70 ವರ್ಷ ಪೂರ್ಣಗೊಂಡನಂತರ ಅರ್ಜಿ ಸಲ್ಲಿಸಿರುತ್ತಾರೆ<br>16. ನೋಂದಣಿ ಪೂರ್ವದಲ್ಲಿ ಮಗುವಿನ ಜನನ ಆಗಿರುತ್ತದೆ. |
| 08 | ಪಿಂಚಣಿ ಯೋಜನೆ | 1. ಇದೇ ಪ್ರಕರಣ ಈಗಾಗಲೇ ಅರ್ಜಿ ಸಲ್ಲಿಸಲಾಗಿದೆ.<br>2. ಉದ್ಯೋಗ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲ.<br>3. ಅರ್ಜಿದಾರರ ಪ್ರಸ್ತುತ ವಿಳಾಸ ಸ್ಥಳ ಪರಿಶೀಲನೆಗಾಗಿ ತೆರಳಿದಾಗ ವಿಳಾಸ ಪತ್ತೆಯಾಗಿರುವುದಿಲ್ಲ.<br>4. ಮಂಡಳಿಯಡಿ ನೋಂದಾಯಿತರಾಗಿ 03 ವರ್ಷಗಳ ಅರ್ಹತಾ ಅವಧಿಯನ್ನು ಪೂರ್ಣಗೊಳಿಸಿರುವುದಿಲ್ಲ.<br>5. ಅರ್ಜಿದಾರರು 60 ವರ್ಷ ವಯಸ್ಸನ್ನು ಪೂರ್ಣಗೊಳಿಸಿರುವುದಿಲ್ಲ.<br>6. 60 ವರ್ಷ ಪೂರ್ಣಗೊಳ್ಳುವವರೆಗೆ ಅರ್ಜಿದಾರರ ಕಾರ್ಮಿಕರ ಗುರುತಿನ ಚೀಟಿ ಸದಸ್ಯತ್ವವು ಚಾಲ್ತಿಯಲ್ಲಿರುವುದಿಲ್ಲ.<br>7. ನೋಂದಾಯಿತ ಫಲಾನುಭವಿಯ ಸದಸ್ಯತ್ವವು ನವೀಕರಣಗೊಂಡಿರುವುದಿಲ್ಲ.<br>8. ಸರ್ಕಾರದ ಇತರೆ ಇಲಾಖೆಯಲ್ಲಿ ಪಿಂಚಣಿ/ಸಮನಾAತರ ಸಹಾಯಧನ ಪಡೆಯಲಾಗುತ್ತಿದೆ.<br>9. ನಿಯಮ 49 (ಸಿ) ರಡಿ ನಿಗದಿಪಡಿಸಿರುವ ಕಾಲಮಿತಿಯೊಳಗೆ ಅರ್ಜಿ ಸಲ್ಲಿಸಿರುವುದಿಲ್ಲ.<br>10. ಉದ್ಯೋಗ ಪ್ರಮಾಣ ಪತ್ರದಲ್ಲಿ ಎಲ್ಲಾ ಕಾಲಂಗಳನ್ನು ಪೂರ್ಣ ವಿವರಗಳೊಂದಿಗೆ ಭರ್ತಿ ಮಾಡಿರುವುದಿಲ್ಲ.<br>11. ಸ್ವಯಂ ದೃಢೀಕರಣ/ಘೋಷಣಾ ಪತ್ರ ಸಲ್ಲಿಸಿರುವುದಿಲ್ಲ.<br>12. ಸ್ವಯಂ ದೃಢೀಕರಣ/ಘೋಷಣಾ ಪತ್ರದಲ್ಲಿ ಎಲ್ಲಾ ಕಾಲಂಗಳನ್ನು ಪೂರ್ಣ ವಿವರಗಳೊಂದಿಗೆ ಭರ್ತಿ ಮಾಡಿರುವುದಿಲ್ಲ.<br>13. ಪರಿಶೀಲನೆಯಿಂದ ಫಲಾನುಭವಿಯು ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸ ನಿರ್ವಹಿಸಿರುವುದಿಲ್ಲವೆಂದು ತಿಳಿದು ಬಂದಿರುತ್ತದೆ. |

| | | |
|---|---|---|
| | | 14. ಅರ್ಜಿ ಪರಿಶೀಲನೆಗಾಗಿ ವಾಸ ಸ್ಥಳ ವಿವರ ಪತ್ತೆಯಾಗಿರುವುದಿಲ್ಲ. |
| 09 | ವೈದ್ಯಕೀಯ ನೆರವು | 1. ಸಿಜಿಹೆಚ್‌ಎಸ್ ದರಗಳನ್ವಯ ಚಿಕಿತ್ಸಾ ದರಗಳನ್ನು ವೈಧ್ಯಧಿಕಾರಿಗಳಿಂದ ಪರಿಶೀಲಿಸಲು ಚಿಕಿತ್ಯೆಯ ಮೂಲಕ ಬಿಲ್ಲುಗಳನ್ನು ಕಛೇರಿಗೆ ಸಲ್ಲಿಸಿರುವುದಿಲ್ಲ. ಒಳರೋಗಿಯಾಗಿ ಕನಿಷ್ಟ 48 ಗಂಟೆಗಳ ಕಾಲ ಚಿಕಿತ್ಸೆ ಪಡೆದಿರುವುದಿಲ್ಲ/ದಾಖಲಾತಿ ಸಲ್ಲಿಸಿರುವುದಿಲ್ಲ.<br>2. ಉದ್ಯೋಗ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲ. ಫಾರಂ 22(A) ಸಲ್ಲಿಸಿರುವುದಿಲ್ಲ.<br>3. ಅರ್ಜಿದಾರರ ಪ್ರಸ್ತುತ ವಿಳಾಸ ಸ್ಥಳ ಪರಿಶೀಲನೆಗಾಗಿ ತೆರಳಿದಾಗ ವಿಳಾಸ ಪತ್ತೆಯಾಗಿರುವುದಿಲ್ಲ.<br>4. ನಿಯಮ 46ರಲ್ಲಿ ನಿಗದಿಪಡಿಸಿರುವಂತೆ ಸರ್ಕಾರದ ಮಾನ್ಯತೆ ಪಡೆದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ.<br>5. ಒಳರೋಗಿಯಾಗಿ ಕನಿಷ್ಠ ೪೮ ಗಂಟೆಗಳ ಕಾಲ ಚಿಕಿತ್ಸೆ ಪಡೆದಿರುವುದಿಲ್ಲ/ದಾಖಲಾತಿ ಸಲ್ಲಿಸಿರುವುದಿಲ್ಲ.<br>6. ವೈದ್ಯಕೀಯ ಧನಸಹಾಯ ಕೋರಲಾಗಿರುವ ಅವಲಂಭಿತರು ಮಂಡಳಿಯು ನಿಯಮ 2(ಪಿ) 1 ರಲ್ಲಿ ವ್ಯಾಖ್ಯಾನಿಸಿರುವ 'ಅವಲಂಭಿತರು' ವ್ಯಾಖ್ಯಾನದಡಿ ಬರುವುದಿಲ್ಲ.<br>7. ನೋಂದಾಯಿತ ಫಲಾನುಭವಿಯ ಸದಸ್ಯತ್ವವು ನವೀಕರಣಗೊಂಡಿರುವುದಿಲ್ಲ.<br>8. ಉದ್ಯೋಗ ಪ್ರಮಾಣ ಪತ್ರದಲ್ಲಿ ಎಲ್ಲಾ ಕಾಲಂಗಳನ್ನು ಪೂರ್ಣ ವಿವರಗಳೊಂದಿಗೆ ಭರ್ತಿ ಮಾಡಿರುವುದಿಲ್ಲ.<br>9. ಸ್ವಯಂ ದೃಢೀಕರಣ/ಘೋಷಣಾ ಪತ್ರ ಸಲ್ಲಿಸಿರುವುದಿಲ್ಲ.<br>10. ಸ್ವಯಂ ದೃಢೀಕರಣ/ಘೋಷಣಾ ಪತ್ರದಲ್ಲಿ ಎಲ್ಲಾ ಕಾಲಂಗಳನ್ನು ಪೂರ್ಣ ವಿವರಗಳೊಂದಿಗೆ ಭರ್ತಿ ಮಾಡಿರುವುದಿಲ್ಲ.<br>11. ಫಲಾನುಭವಿಯ ಕಾರ್ಮಿಕರ ಗುರುತಿನ ಚೀಟಿಯಲ್ಲಿ ಅವಲಂಭಿತರ ವಿವರ ಇರುವುದಿಲ್ಲ.<br>12. ಪರಿಶೀಲನೆಯಿಂದ ಫಲಾನುಭವಿಯು ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸ ನಿರ್ವಹಿಸಿರುವುದಿಲ್ಲವೆಂದು ತಿಳಿದು ಬಂದಿರುತ್ತದೆ.<br>13. ಅರ್ಜಿ ಪರಿಶೀಲನೆಗಾಗಿ ವಾಸ ಸ್ಥಳ ವಿವರ ಪತ್ತೆಯಾಗಿರುವುದಿಲ್ಲ.<br>14. ಇದೇ ಪ್ರಕರಣ ಈಗಾಗಲೇ ಅರ್ಜಿ ಸಲ್ಲಿಸಲಾಗಿದೆ.<br>15. 60 ವರ್ಷ ಪೂರ್ಣಗೊಂಡನಂತರ ಅರ್ಜಿ ಸಲ್ಲಿಸಿರುತ್ತಾರೆ. ನಿಯಮ 49(ಸಿ)ರಡಿ ನಿಗದಿಪಡಿಸಿರುವ ಕಾಲಮಿತಿಯಲ್ಲಿ ಅರ್ಜಿ ಸಲ್ಲಿಸಿರುವುದಿಲ್ಲ. |
| 10 | ಮದುವೆ ಸಹಾಯಧನ | 1. ಮದುವೆ ದಿನಾಂಕದಂದು ಅರ್ಜಿದಾರರ ಕಾರ್ಮಿಕರ ಗುರುತಿನ ಚೀಟಿ ನವೀಕರಣ/ ನೋಂದಣಿ ಸದಸ್ಯತ್ವವು ಚಾಲ್ತಿ ಇರುವುದಿಲ್ಲ.<br>2. ಮದುವೆ ದಿನಾಂಕಕ್ಕೆ ಅರ್ಜಿದಾರರು ಮಂಡಳಿಯಲ್ಲಿ ಫಲಾನುಭವಿಯಾಗಿ ನೋಂದಣಿಗೊಂಡ 1 ವರ್ಷದ ಅರ್ಹತಾ ಅವಧಿಯನ್ನು ಪೂರ್ಣಗೊಳಿಸಿರುವುದಿಲ್ಲ.<br>3. ನಿಯಮ 49(ಸಿ)ರಡಿ ನಿಗದಿಪಡಿಸಿರುವ ಕಾಲಮಿತಿಯಲ್ಲಿ ಅರ್ಜಿ |

| | | |
|---|---|---|
| . | | ಸಲ್ಲಿಸಿರುವುದಿಲ್ಲ.<br>4. ಗುರುತಿನ ಚೀಟಿಯಲ್ಲಿ ವಧು/ವರ ಅಥವಾ ಮಗ/ಮಗಳ ವಿವರ ಇರುವುದಿಲ್ಲ.<br>5. ಉಪನೋಂದಣಾಧಿಕಾರಿಗಳಿಂದ ಪಡೆದ ಮದುವೆ ನೋಂದಣಿ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲ.<br>6. ಪರಿಶೀಲನೆಯಿಂದ ಫಲಾನುಭವಿಯ/ಮಗ/ಮಗಳ ಮದುವೆಯಾಗಿ ವರ್ಷಗಳೇ ಕಳೆದಿರುವುದು ಕಂಡು ಬಂದಿರುತ್ತದೆ.<br>7. ಅರ್ಜಿದಾರರು ಕಟ್ಟಡ ಮತ್ತು ಇತರೆ ನಿರ್ಮಾಣ ಕೆಲಸ ನಿರ್ವಹಿಸುತ್ತಿಲ್ಲವೆಂದು ಪರಿಶೀಲನೆಯಿಂದ ಕಂಡು ಬಂದಿರುತ್ತದೆ.<br>8. ಮದುವೆಯಾಗಿ ಆರು ತಿಂಗಳ ಒಳಗಾಗಿ ಅರ್ಜಿ ಸಲ್ಲಿಸಿರುವುದಿಲ್ಲ.<br>9. ಇದೇ ಮದುವೆಗಾಗಿ ಕುಟುಂಬದ ನೊಂದಾಯಿತ ಕಾರ್ಮಿಕರು ಈಗಾಗಲೇ ಮದುವೆ ಧನಸಹಾಯಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.<br>10. ಸ್ವಯಂ ದೃಢೀಕರಣ/ಘೋಷಣಾ ಪತ್ರ ಸಲ್ಲಿಸಿರುವುದಿಲ್ಲ.<br>11. ಉದ್ಯೋಗ ಪ್ರಮಾಣ ಪತ್ರ ಸಲ್ಲಿಸಿರುವುದಿಲ್ಲ.<br>12. ಉದ್ಯೋಗ ಪ್ರಮಾಣ ಪತ್ರದಲ್ಲಿ ಎಲ್ಲಾ ಕಾಲಂಗಳನ್ನು ಪೂರ್ಣ ವಿವರಗಳೊಂದಿಗೆ ಭರ್ತಿ ಮಾಡಿರುವುದಿಲ್ಲ.<br>13. ಸ್ವಯಂ ದೃಢೀಕರಣ/ಘೋಷಣಾ ಪತ್ರದಲ್ಲಿ ಎಲ್ಲಾ ಕಾಲಂಗಳನ್ನು ಪೂರ್ಣ ವಿವರಗಳೊಂದಿಗೆ ಭರ್ತಿ ಮಾಡಿರುವುದಿಲ್ಲ.<br>14. ಅರ್ಜಿದಾರರ ಪ್ರಸ್ತುತ ವಿಳಾಸ ಸ್ಥಳ ಪರಿಶೀಲನೆಗಾಗಿ ತೆರಳಿದಾಗ ವಿಳಾಸ ಪತ್ತೆಯಾಗಿರುವುದಿಲ್ಲ.<br>15. ನಕಲಿ/ತಿದ್ದುಪಡಿ ಮಾಡಿರುವ ಮದುವೆ ಪ್ರಮಾಣ ಪತ್ರ ಸಲ್ಲಿಸಿರುತ್ತೀರಿ<br>16. ಸದರಿ ಫಲಾನುಭವಿಯು ಸಹಾಯಧನದ ಅರ್ಜಿಯಲ್ಲಿ ಲಗತ್ತಿಸಿರುವ ಮದುವೆ ನೋಂದಣಿ ಪತ್ರ ಮತ್ತು ಮದುವೆ ಇನ್ವಿಟೇಷನ್ ನಲ್ಲಿ ಇರುವ ಮದುವೆ ದಿನಾಂಕ ವ್ಯತ್ಯಾಸವಿದೆ<br>17. ಇದೇ ಪ್ರಕರಣ ಈಗಾಗಲೇ ಅರ್ಜಿ ಸಲ್ಲಿಸಲಾಗಿದೆ.<br>18. 61 ವರ್ಷ ಪೂರ್ಣಗೊಂಡನಂತರ ಅರ್ಜಿ ಸಲ್ಲಿಸಿರುತ್ತಾರೆ<br>19. ನಿಯಮ 49(d) ಪ್ರಕಾರ ನೊಂದಾಯಿತಾ ಫಲಾನುಭವಿಯ ಮಗ ಅಥವಾ ಮಗಳು ವಿವಾಹ ಕಾಯ್ದೆ ಪ್ರಕಾರ ನಿಗಧಿಪಡಿಸಿರುವ ವಯೋಮಿತಿಯನ್ನು ತಲಿಪಿರುವುದಿಲ್ಲ.<br>20. ಫಲಾನುಭವಿಯು ಈ ಹಿಂದೆ 2 ಬಾರಿ ಮದುವೆ ಧನಸಹಾಯ ಪಡೆದಿದ್ದು, 3ನೇ ಬಾರಿ ಅರ್ಜಿ ಸಲ್ಲಿಸಿರುತ್ತಾರೆ.<br>21. ಫಲಾನುಭವಿ ತನ್ನ 2ನೇ ಮದುವೆಗೆ ಅರ್ಜಿ ಸಲ್ಲಿಸಿದ್ದಾರೆ.<br>22. ಮದುವೆಯಾದ 6 ತಿಂಗಳೊಳಗೆ ಅರ್ಜಿ ಸಲ್ಲಿಸಲು ಅವಕಾಶವಿದ್ದು ಆದರೆ ಸದರಿ ಅವಧಿಯಲ್ಲಿ ಅರ್ಜಿ ಹಾಕಿರುವುದಿಲ್ಲ. ಅಲ್ಲದೇ 6 ತಿಂಗಳೊಳಗೆ ಮದುವೆ ನೋಂದಣಿಯಾಗದೇ ಇದ್ದ ಕಾರಣ ನಿಮ್ಮ ವಿಳಂಬ ನಿಮ್ಮಿಂದಲೇ ಆಗಿದೆ ಎಂದು ತಿಳಿಯುತ್ತದೆ ಇದು ಸಕಾರಣವಲ್ಲವಾದ ಕಾರಣ ನಿಮ್ಮ ಅರ್ಜಿಯನ್ನು ತಿರಸ್ಕರಿಸಿದೆ. |